**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಎಸ್ ಸಿ ಸಂಖ್ಯೆ:**49/2020**

ಪ್ರಾಸಾ.**09** ಚಾಸಾ.**12**

ಸಾಕ್ಷಿದಾರರ ಹೆಸರು : ಗಂಗಾಧರ

ತಂದೆ ಹೆಸರು : ಮುತ್ತುರಾಯಪ್ಪ

ವಯಸ್ಸು : **45** ವರ್ಷಗಳು

ಉದ್ಯೋಗ : ವ್ಯವಸಾಯ

ವಾಸ : ಉಜ್ಜನಿ

ಪ್ರಮಾಣ ವಚನ ಬೋಧಿಸಿದ ದಿನಾಂಕ: **18.06.2025**

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಈಗ ನನಗೆ ತೋರಿಸಿದ ದಾಖಲೆಯಲ್ಲಿನ ರುಜು ನನ್ನ ರುಜು. ನನಗೆ ತೋರಿಸಿದ ದಾಖಲೆಯನ್ನುಈಗಾಗಲೇ ನಿಪಿ-32 ಎಂದು ಗುರುತಿಸಲಾಯಿತು. ನಿಪಿ-32 ರಲ್ಲಿ ನನ್ನ ರುಜುವನ್ನು ನಿಪಿ-32(ಬಿ) ಎಂದು ಗುರುತಿಸಲಾಯಿತು.

ನಿಪಿ-32(ಬಿ) ರುಜುವನ್ನು ಈಗ್ಗೆ 4-5 ವರ್ಷಗಳ ಹಿಂದಿನ ದಿನ ಪೊಲೀಸರು ಗೌರಮ್ಮನ ಕೆರೆ ಸಮೀಪ ಬಂದಾಗ ನಾನು ಮಾಡಿದ್ದೇನೆ. ಮಹಜರು ಜರುಗಿಸುವುದಾಗಿ ನುಡಿದು ನನ್ನ ರುಜು ಪಡೆದರು. ಪೊಲೀಸರು ಅಮಾನತ್ತು ಕ್ರಮಗಳನ್ನು ಜರುಗಿಸಿದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮತ್ತು ಪ್ರಾಸಾ-08 ರುಜುಗಳನ್ನು ಮಾಡಿದ್ದೇವೆ. ಈ ಸಂಗತಿಗಳನ್ನು ಹೋರತು ಪಡಿಸಿ ಇತರ ಸಂಗತಿಗಳು ನನಗೆ ಗೊತ್ತಿಲ್ಲ.

**(**ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು**,** ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ**.)**

ಪಾಟೀ ಸವಾಲುಃ ರಾಜ್ಯದ ಪರ ಅಭಿಯೋಜಕರಿಂದಃ

ನಿಪಿ-32(ಬಿ) ರುಜುವನ್ನು ನಾನು ದಿನಾಂಕ 28.08.2018 ರಂದು ಮಾಡಿದ್ದೇನೆ. ಸದರಿ ರುಜುವನ್ನು ರಾಮಚಂದ್ರ ರೆಡ್ಡಿಯವರ ಎಸ್ಟೇಟಿನ ಉತ್ತರ ದಿಕ್ಕಿಗೆ ಇರುವ ತಂತಿ ಬೇಲಿಯ ಹೊರಭಾಗದ ನೀರು ಹರಿಯುವ ಕಾಲುವೆ ಬಳಿ ಹಾಕಲಾಯಿತು. ಆದರೆ ಸದರಿ ಸ್ಥಳದಲ್ಲಿ ಮತ್ತು ಸಮಯದಲ್ಲಿ 8 ನೇ ಆರೋಪಿ ಮುನಿರಾಜು ಸಹ ಹಾಜರಿದ್ದನು ಎಂದರೆ ಆತ ಇರಲಿಲ್ಲ. ಪೊಲೀಸರು ಸ್ಥಳದಲ್ಲಿ ಮುನಿರಾಜುವನ್ನು ವಿಚಾರಿಸಿದರು ಎಂದರೆ ನನಗೆ ಗೊತ್ತಿಲ್ಲ. ವಿಚಾರಿಸಿರಬಹುದು, ಇಲ್ಲದೇಯೂ ಇರಬಹುದು. ನಾನು ಮತ್ತು ಮುನಿರಾಜು ಒಟ್ಟಾರೆ ಪೊಲೀಸ್ ಜೀಪಿದ್ದ ಸ್ಥಳದಿಂದ ರುಜು ಮಾಡಿದ ಸ್ಥಳಕ್ಕೆ ಹೋದೇವು ಎಂದರೆ ಸರಿಯಲ್ಲ. ಮುನಿರಾಜುವಿನ ಸೂಚನೆ ಮೇರೆಗೆ ಪೋಲಿಸರು ನೀಲಗಿರಿ ಮರದ 15 ಗೂಟಗಳು, 605 ಅಡಿ ಉದ್ದದ ಒಂದು ಕಬ್ಬಿಣದ ತಂತಿ(ಬೈಂಡಿಂಗ್ ವೈಯರ್), 110 ಅಡಿ ಉದ್ದದ ಮತ್ತೊಂದು ವೈಯರ್, 2 ಗಾಜಿನ ಔಷಧಿ ಶಿಷೆಗಳು, 1 ಟಾರ್ಚ, ಒಂದು ಪ್ಲಾಸ್ಟಿಕ್ ಬ್ಯಾಗ್ ಹಾಗೂ ನೀಲಗಿರಿ ಮರದ ರೋಟಿಗಳು ಇವುಗಳನ್ನು ನಿಮಗೆ ತೋರಿಸಿ ನಿಮ್ಮ ಸಮಕ್ಷಮ ಅಮಾನತ್ತು ಕ್ರಮಕ್ಕೆ ಜರುಗಿಸಿ ನಿಪಿ-32 ರ ದಾಖಲೆಯಂತೆ ಪೊಲೀಸರು ಅಮಾನತ್ತು ಪಂಚನಾಮೆಯನ್ನು ಬರೆದರು ಎಂದರೆ ಸರಿಯಲ್ಲ. ನಿಪಿ-32 ರ ದಾಖಲೆ ಬಗ್ಗೆ ನಿಮಗೆ ಕೂಲಂಕೂಷಮಾಹಿತಿ ಇದ್ದರು ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಅಸತ್ಯ ಸಾಕ್ಷಿ ನುಡಿದಿರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ

ಅರೋಪಿಗಳ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆಃ ಇಲ್ಲ

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.